INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-6, Issue -4, July--August, 2024,
PageNo,78-85
Peer -Reviewed, Refereed Journal

# ಅಂಬೇಡ್ಕರ್ ಅವರ ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್ ಬರೆಹದ ವೈಶಿಷ್ಟ್ಯತೆ: ಒಂದು ನೋಟ

ಡಾ.ಎಂ.ರಾಚಪ್ಪಾಜಿ.[1]
ಡಾ.ಕಾಳಸ್ವಾಮಿ.ಹೆಚ್.ಎನ್[2]

**ಆ**ಧುನಿಕ ಜಗತ್ತಿನ ಬುದ್ಧಿಜೀವಿ, ಮಹಾನ್ ಚಿಂತಕ ಹಾಗೂ ಬರಹಗಾರರಲ್ಲಿ ಅಂಬೇಡ್ಕರ್ ಅವರು ಅಗ್ರಮಾನ್ಯರು ಹಾಗೂ ಸಮಾನತೆಯ ಸಮರ್ಥಕ ಮತ್ತು ಪ್ರಬಲ ಪ್ರತಿಪಾದಕರು. ಅಂಬೇಡ್ಕರ್ ಅವರು ತಮ್ಮ ಜೀವನದುದ್ದಕ್ಕೂ ದಮನಕಾರಿ ಅಸ್ಪೃಶ್ಯತೆ, ಜಾತಿ ವ್ಯವಸ್ಥೆ ಮತ್ತು ಮಾನವ ವಿರೋಧಿ ತತ್ವ ಸಿದ್ಧಾಂತದ ವಿರುದ್ಧ ಬಹುದೊಡ್ಡ ಸಮರವನ್ನೇ ಸಾರಿ, ಅಲ್ಲಿನ ಅಸಮಾನತೆಯ ಬೇರನ್ನು ಅಲುಗಾಡಿಸಿದರು. ಅಂಬೇಡ್ಕರ್ ಅವರು ಇಡೀ ಜಗತ್ತಿನಲ್ಲೇ ಸಾಮಾಜಿಕ ಕ್ರಾಂತಿಯ ಜನಜಾಗೃತಿಯ ಸಂಕೇತ. ಭಾರತೀಯ ಸಮಾಜದಲ್ಲಿ ಶೂದ್ರ, ಮಹಿಳೆ ಹಾಗೂ ಅಸ್ಪೃಶ್ಯರನ್ನು ಶತ–ಶತಮಾನಗಳಿಂದ ದಾರಿದ್ರ್ಯ, ಶೋಷಣೆ, ತಾರತಮ್ಯ ಮತ್ತು ದಬ್ಬಾಳಿಕೆಗೆ ಒಳಪಡಿಸಿರುವುದನ್ನು ಇತಿಹಾಸದುದ್ದಕ್ಕೂ ಕಾಣುತ್ತೇವೆ. ಅಂಥ ಬಹುಸಂಖ್ಯಾತ ಬಹುಜನರ ಬಾಳಿನಲ್ಲಿ ಆಶಾಕಿರಣವಾಗಿ ಅವರ ಅದಮ್ಯ ಶಕ್ತಿಯಾಗಿ ಪರಿಣಮಿಸಿದ್ದಾರೆ.

ಅಂಬೇಡ್ಕರ್ ಅವರ ಸಮಗ್ರ ಬರೆಹಗಳನ್ನು ಗಮನಿಸಿದರೆ; ಸಮಕಾಲೀನ ಸಂದರ್ಭದ ಇತರ ಬರಹಗಾರರ ಬರೆಹಗಳಿಗಿಂತಲೂ ವಿಭಿನ್ನ ಹಾಗೂ ವಿಶಿಷ್ಟವಾಗಿದೆ. ಅಂಬೇಡ್ಕರ್ ಅವರು ಬೆಳೆದು ಬಂದ ಪರಿಸರ, ಅನುಭವಿಸಿದ ನೋವುಗಳು, ಅವರ ಮೇಲಾದ ದೈಹಿಕ ಮತ್ತು ಮಾನಸಿಕ ಆಘಾತಗಳು, ಅದಕ್ಕೂ ಮೀರಿ ಅವರಲ್ಲಿದ್ದ ದೃಢಸಂಕಲ್ಪ ಸ್ವಾವಲಂಬಿ ಮತ್ತು ಸ್ವಾಭಿಮಾನದ ಗುಣಗಳು ಅವರ ಬರವಣಿಗೆಗಳಲ್ಲಿ ಕ್ರಾಂತಿಕಾರಕ ಸ್ವರೂಪ ಪಡೆದವು. ವಿಶ್ವದ ಬರಹಗಾರರ ಹಾಗೂ ಚಿಂತಕರ ಸಾಲಿನಲ್ಲಿ ಅಂಬೇಡ್ಕರ್ ಅವರು ಅಗ್ರಮಾನ್ಯರು. ಅಂತಲೇ ಅವರನ್ನು ಕೊಲಂಬಿಯಾ ವಿಶ್ವವಿದ್ಯಾನಿಲಯ 'ವಿಶ್ವದ ಜ್ಞಾನಸಂಕೇತವೇದು ಪರಿಗಣಿಸಿತು ಮತ್ತು ಅವರ ಜನ್ಮ ದಿನಾಚರಣೆಯನ್ನು ವಿಶ್ವಸಂಸ್ಥೆ ವಿಶ್ವಜ್ಞಾನ ದಿನಾಚರಣೆಯಾಗಿ ಆಚರಿಸಲ್ಪಡುತ್ತದೆ.' 1916 ರಿಂದ ಪ್ರಾರಂಭವಾದ ಅವರ ಬರವಣಿಗೆ ಬದುಕಿನ

---

[1].ಅಧ್ಯಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

[2].. ಸಂಶೋಧನಾ ಸಹಾಯಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಕೊನೆಯ ಉಸಿರಿನವರೆಗೆ ನಿರಂತರವಾಗಿ ಸಾಗಿ ಬಂದಿರುವದನ್ನು ಕಾಣುಬಹುದು. ಆದ್ದರಿಂದಲೇ 1916 ರಿಂದ 1956ರವರೆಗಿನ ಸರಿಸುಮಾರು ನಾಲ್ಕು ದಶಕಗಳ ಬರೆಹಗಳಲ್ಲಿ ಹಲವು ಹತ್ತು ವೈವಿಧ್ಯತೆ ಇರುವದು ಎದ್ದು ಕಾಣುತ್ತದೆ. ಹಲವು ಮಹತ್ವದ ವಿಷಯಗಳ ಮೇಲೆ ಹೊಸ ಬೆಳಕು ಚೆಲ್ಲಿರುವ ಘನವಿದ್ವಾಂಸರು ಅಂಬೇಡ್ಕರ್. ಅಂಬೇಡ್ಕರ್ ಅವರು ತಮ್ಮದೇ ಆದಂತಹ ವಿಶಿಷ್ಟತೆಯ ಬರೆಹಗಳ ಮೂಲಕ ಜಾಗತಿಕ ಚರಿತ್ರೆಯಲ್ಲಿ ಅಚ್ಚಳಿಯದೇ ಇರುವಂತೆ ಛಾಪಿನ ಮುದ್ರೆಯೊಂದನ್ನು ಹಾಕಿದವರು.

ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಅತ್ಯಂತ ವೈಶಿಷ್ಟ್ಯತೆಯಿಂದಲೇ ಕೂಡಿರುತ್ತವೆ. ಅಂಬೇಡ್ಕರ್ ಅವರು ತಮ್ಮ ಬದುಕಿನ ಉದ್ದಕ್ಕೂ ಬರೆದಿರುವ ಬಿಡಿ ಬಿಡಿ ಲೇಖನಗಳು ಮತ್ತು ಇತರ ಬರೆಹಗಳು, ಅಖಿಲ ಭಾರತೀಯ ರೇಡಿಯೋ, ದೂರದರ್ಶನ, ಪತ್ರಿಕಾ ಹೇಳಿಕೆಗಳು, ಸಂದರ್ಶನಗಳು, ವಿಮರ್ಶೆಗಳು, ಚರ್ಚೆಗಳು, ಸಂವಾದಗಳು ಲೆಕ್ಕಕ್ಕೆ ಇಲ್ಲದಷ್ಟು, ಅಂದರೆ, ಸಮುದ್ರದಷ್ಟು ಆಳವಾಗಿದೆ ಮತ್ತು ಆಕಾಶದಷ್ಟು ಎತ್ತರವಾಗಿರುವುದನ್ನು ಗುರುತಿಸಬಹುದು. ಆದರೆ, ಆ ಬಗೆಯಲ್ಲಿನ ಪ್ರಧಾನ ಬರೆಹಗಳಲ್ಲಿ ಒಂದಾಗಿರುವ **ಬುದ್ಧ ಅಥವಾ ಕಾರ್ಲ್ ಮಾರ್ಕ್ಸ್** ಎಂಬುದರ ವೈಶಿಷ್ಟ್ಯತೆಯನ್ನು ಕುರಿತಂತೆ ಪ್ರಸ್ತುತ ಲೇಖನದಲ್ಲಿ ಈ ಮುಂದಿನಂತೆ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು **ಬುದ್ಧ ಅಥವಾ ಕಾರ್ಲ್ ಮಾರ್ಕ್ಸ್** ಎಂಬ ಸಂಶೋಧನಾತ್ಮಕ ಲೇಖನವನ್ನು ಬರೆದು ಪ್ರಕಟಿಸಿದ್ದಾರೆ. ಈ ಲೇಖನದಲ್ಲಿ ಬುದ್ಧ ಅಥವಾ ಕಾರ್ಲ್ ಮಾರ್ಕ್ಸ್ ಈ ಇಬ್ಬರ ವಿಚಾರಧಾರೆಗಳ ತೌಲನಿಕವಾದ ತಳಸ್ಪರ್ಶಿಯಾದ ಅಧ್ಯಯನ ಮಾಡಿದ್ದಾರೆ. ಅಂಬೇಡ್ಕರ್ ಅವರು ಬೌದ್ಧಧಮ್ಮ ಮತ್ತು ಕಮ್ಯುನಿಸಂಗಳು ತಮ್ಮ ಸಾಧನೆಗಳಲ್ಲಿ ಮಾತ್ರವೇ ವ್ಯತ್ಯಾಸಗಳು ಕಂಡುಬರುತ್ತದೆ. ಏಕೆಂದರೆ, ಅಂತ್ಯವು ಒಂದೇ ಆಗಿರುತ್ತದೆ. ಕಮ್ಯುನಿಸಂಗೆ ಹಿಂಸೆ, ರಕ್ತಪಾತ ಮತ್ತು ಜಾರಿಯ ಅಗತ್ಯವಿರುವಾಗ; ಬುದ್ಧಗುರುವಿನ ಉದಾತ್ತ ಬೋಧನೆಗಳು ಜನರ ಮನಸ್ಥಿತಿಯನ್ನು ಬದಲಾಯಿಸುವ ಮತ್ತು ಅವರನ್ನು ಬಹುಸುಲಭವಾಗಿ ತಲುಪುವ ಗುರಿಯನ್ನು ಹೊಂದಿವೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಇಬ್ಬರ ಚಿಂತನೆಗಳು ತಮ್ಮದೇ ಆದಂತಹ ಮಾರ್ಗವನ್ನು ಅನುಸರಿಸುವ ಮೂಲಕ ಜನರನ್ನು ತಲುಪುತ್ತವೆ. ಅಂಬೇಡ್ಕರ್ ಅವರು ಬುದ್ಧ ಅಥವಾ ಕಾರ್ಲ್ ಮಾರ್ಕ್ಸ್ ಎಂಬ ಪ್ರಬಂಧದ ವಿಷಯವನ್ನು 1956ರಲ್ಲಿ ನೇಪಾಳದ ಕಠ್ಮಂಡುವಿನಲ್ಲಿ ನಡೆದಿರುವ ವಿಶ್ವಬೌದ್ಧರ ಫೆಲೋಶಿಪ್‌ನ ನಾಲ್ಕನೆಯ ಸಮ್ಮೇಳನದ ಪ್ರತಿನಿಧಿಗಳ ಮುಂದೆ ಮಾಡಿರುವ ಪ್ರಮುಖ ಭಾಷಣವಾಗಿದೆ. ಈ ಭಾಷಣವನ್ನು ಬರೆಹ ರೂಪದ ಪಠ್ಯವಾಗಿ 1987ರಲ್ಲಿ ಮಹಾರಾಷ್ಟ್ರ ಸರ್ಕಾರವು ಡಾ.ಬಿ.ಆರ್.ಅಂಬೆಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು ಎಂಬ ಬೃಹತ್ ಸಂಪುಟಗಳಲ್ಲಿನ ಮೂರನೆಯ ಸಂಪುಟದಲ್ಲಿ ಅಡಕಗೊಳಿಸಲಾಗಿರುತ್ತದೆ. ಅನಂತರದಲ್ಲಿಯೇ ಈ ಮಹತ್ವದ ಲೇಖನವು ಹೊರಜಗತ್ತಿನಲ್ಲಿ ಹೆಚ್ಚು ಚಾಲ್ತಿಗೆ ಮತ್ತು ಚರ್ಚೆಗೆ ಬಂದಿರುವುದನ್ನು ಗುರುತಿಸಬಹುದು.

ಅಂಬೇಡ್ಕರ್ ಅವರು ಬುದ್ಧ ಅಥವಾ ಕಾರ್ಲ್ ಮಾರ್ಕ್ಸ್ ಎಂಬ ತಮ್ಮ ಸಂಶೋಧನಾತ್ಮಕ ಬರೆಹದಲ್ಲಿ ಮೊದಲಿಗೆ ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್ ಅವರುಗಳ ನಡುವೆ ಸರಿಸುಮಾರು 2381 ವರ್ಷಗಳ ಅಂತರವಿದೆ ಎಂಬುದನ್ನು ದಾಖಲೀರಿಸಿದ್ದಾರೆ. ಅಂದರೆ, ಗುರುಬುದ್ಧ ಜನಿಸಿದ್ದು ಸರಿಸುಮಾರು ಕ್ರಿ.ಪೂ. 563ರಲ್ಲಿ, ಕಾರ್ಲ್‌ಮಾರ್ಕ್ಸ್ ಜನಿಸಿದ್ದು ಸರಿಸುಮಾರು ಕ್ರಿ.ಶ. 1818ರಲ್ಲಿ ಎಂಬುದನ್ನು ಹಲವು ಆಧಾರಗಳಿಂದ ಗುರುತಿಸಬಹುದು. ಅಂದರೆ, ಒಬ್ಬರು ಕ್ರಿಸ್ತಪೂರ್ವ, ಮತ್ತೊಬ್ಬರು ಕ್ರಿಸ್ತಶಕವಾಗಿರುತ್ತದೆ. ಬುದ್ಧಗುರು ಇಡೀ ಜಗತ್ತಿನಲ್ಲಿಯೇ ಹೊಸ ರಾಜಕೀಯ ಸಿದ್ಧಾಂತದ ಪ್ರತಿಪಾದಕರಾದರೆ, ಕಾರ್ಲ್‌ಮಾರ್ಕ್ಸ್ ಹೊಸ ಆರ್ಥಿಕ ವ್ಯವಸ್ಥೆಯ ಪ್ರಧಾನ ಶಿಲ್ಪಿಯಾಗಿದ್ದಾರೆ. ಆದ್ದರಿಂದಲೇ ರಾಜಕೀಯ ಮುತ್ಸದ್ಧಿ ಮತ್ತು ಅರ್ಥವಿಜ್ಞಾನಿಯಾಗಿರುವಂತಹ ಅಂಬೇಡ್ಕರ್ ಅವರು ಬುದ್ಧ ಮತ್ತು ಕಾರ್ಲ್‌ಮಾರ್ಕ್ಸ್ ಅವರ ಚಿಂತನಾ ವಿಚಾರಧಾರೆಗಳನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸಲು ಸಾಧ್ಯವಾಗಿರುತ್ತದೆ. ಗುರುಬುದ್ಧ ಅತೀ ಪ್ರಾಚೀನನಾದರೆ, ಕಾರ್ಲ್‌ಮಾರ್ಕ್ಸ್ ಅತೀ ಅರ್ವಾಚೀನನಾಗಿದ್ದಾನೆ ಎಂಬುದು ಕಂಡುಬರುತ್ತದೆ. ಇಂತಹ ಇಬ್ಬರು ಮಹಾನ್ ವ್ಯಕ್ತಿಗಳ ನಡುವೆ ಏನು ಹೋಲಿಕೆ ಇದ್ದಿತು? ಬುದ್ಧಗುರುವಿನಿಂದ ಮಾರ್ಕ್ಸ್‌ವಾದಿಗಳು ಏನನ್ನು ಕಲಿಯಲು ಸಾಧ್ಯ? ಮಾರ್ಕ್ಸ್‌ವಾದಿಗಳಿಗೆ ಬುದ್ಧಗುರು ಏನು ಬೋಧಿಸಲು ಸಾಧ್ಯ? ಆದರೂ ಈ ಇಬ್ಬರ ತುಲನೆಯು ಮಾತ್ರ ಆಕರ್ಷಣೀಯವೂ, ಬೋಧನೀಯವೂ ಆಗಿದೆ. ಆದ್ದರಿಂದಲೇ ಪ್ರಸ್ತುತ ಭಾರತಕ್ಕೆ ಬುದ್ಧ ಮತ್ತು ಕಾರ್ಲ್‌ಮಾರ್ಕ್ಸ್ ಅವರ ವಿಚಾರಧಾರೆಗಳು ಹೆಚ್ಚು ಅನಿವಾರ್ಯ ಮತ್ತು ಅವಶ್ಯಕವಾಗಿರುತ್ತವೆ. ಆದರೆ, ಗುರುಬುದ್ಧರ ಉದಾತ್ತ ಬೋಧನೆಯ ಸಂದೇಶಗಳು ಸಮಕಾಲೀನ ಸಮಾಜಕ್ಕೆ ಅತೀ ಮೌಲ್ಯೀಕವಾದುದ್ದಾಗಿವೆ.

**ಮಹಾಗುರು ಬುದ್ಧರ ತತ್ವದರ್ಶನಗಳು** – ಗುರುಬುದ್ಧರ ಉದಾತ್ತ ತತ್ವದರ್ಶನಗಳು ಈ ಮುಂದಿನಂತಿರುತ್ತವೆ. ಅವುಗಳೆಂದರೆ; ಮುಕ್ತ ಸಮಾಜಕ್ಕೆ ಧರ್ಮದ ಅತ್ಯಗತ್ಯ; ಎಲ್ಲ ಧರ್ಮಗಳನ್ನು ಇಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ; ಧರ್ಮ ಜೀವನ ಸಂಗತಿಗಳಿಗೆ ಸಂಬಂಧಿಸಿರಬೇಕು; ಅದರಲ್ಲಿ ದೇವರು, ಆತ್ಮ ಅಥವಾ ಸ್ವರ್ಗ ಅಥವಾ ಭೂಮಿ ಬಗೆಗಿನ ಊಹೆಗಳ ವಾದಗಳಿಗಲ್ಲ; ದೇವರನ್ನು ಧರ್ಮದ ಕೇಂದ್ರವನ್ನಾಗಿ ಮಾಡುವುದು ತಪ್ಪು; ಆತ್ಮೋದ್ಧಾರವನ್ನು ಧರ್ಮ ಕೇಂದ್ರಗಳನ್ನಾಗಿ ಮಾಡುವುದು ತಪ್ಪು; ಪ್ರಾಣಿ ಬಲಿಗಳನ್ನು ಧರ್ಮದ ಕೇಂದ್ರವನ್ನಾಗಿ ಮಾಡುವುದು ತಪ್ಪು; ನಿಜವಾದ ಧರ್ಮ ಮಾನವನ ಹೃದಯದಲ್ಲಿದೆ ಶಾಸ್ತ್ರದಲ್ಲಿ ಇಲ್ಲ; ಮನುಷ್ಯ ಮತ್ತು ನೀತಿ ಧರ್ಮದ ಕೇಂದ್ರವಾಗಿರಬೇಕು. ಅಲ್ಲದಿದ್ದರೆ, ಧರ್ಮವೆನ್ನುವುದು ಕ್ರೂರ ಮೌಢ್ಯವಾಗಿರುತ್ತದೆ; ನೈತಿಕತೆ ಜೀವನದ ಆದರ್ಶವಾಗಿದ್ದರೆ ಸಾಲದು. ದೇವರು ಇಲ್ಲದೆ ಇರುವುದರಿಂದ ಅದೇ (ನೈತಿಕತೆ) ಜೀವನದ ಧರ್ಮವಾಗಬೇಕು; ಧರ್ಮದ ಕೆಲಸ ಪ್ರಪಂಚದ ಪುನರ್‌ರಚನೆ ಸುಖಸಂವರ್ಧನೆ ಮಾಡುವದು, ಅದರ ಆದಿ ಮತ್ತು ಅಂತ್ಯವನ್ನು ವಿವರಿಸುವುದಿಲ್ಲ; ಹಿತಾಸಕ್ತಿಗಳ ಸಂಘರ್ಷದಿಂದ ಲೋಕದಲ್ಲಿ ದುಃಖವಿದೆ; ಅದನ್ನು ಹೋಗಲಾಡಿಸಲು ಇರುವ ಒಂದೇ

ದಾರಿ ಅಷ್ಟಾಂಗ ಮಾರ್ಗ; ಆಸ್ತಿಯ ಖಾಸಗಿ ಒಡೆತನದಿಂದ ಒಂದು ವರ್ಗಕ್ಕೆ ಅಧಿಕಾರವೂ, ಇನ್ನೊಂದು ವರ್ಗಕ್ಕೆ ದುಃಖವು ಉಂಟಾಗುತ್ತದೆ; ಸಮಾಜದ ಒಳಿತಿಗಾಗಿ ಈ ದುಃಖವನ್ನು ಹೋಗಲಾಡಿಸಬೇಕಾದರೆ, ಅದರ ಕಾರಣವನ್ನು ಹೋಗಲಾಡಿಸುವುದು ಅವಶ್ಯಕ; ಎಲ್ಲ ಮಾನವರೂ ಸಮಾನರು; ಮನುಷ್ಯನನ್ನು ಅರ್ಹತೆಯಿಂದ ಅಳೆಯಬೇಕೆ ಹೊರತು ಹುಟ್ಟಿನಿಂದಲ್ಲ; ಉನ್ನತ ಆದರ್ಶಗಳು ಮುಖ್ಯವಾಗಬೇಕು, ಶ್ರೇಷ್ಠ ಹುಟ್ಟಲ್ಲ; ಎಲ್ಲರ ಬಗ್ಗೆಯೂ ಮೈತ್ರಿಯಿರಬೇಕು, ಶತ್ರುವಿನ ಬಗ್ಗೆಯೂ ಆ (ಕರುಣಾ) ಭಾವನೆ ಇರಬೇಕು; ಎಲ್ಲರಿಗೂ ಕಲಿಯುವ ಹಕ್ಕಿದೆ ಮನುಷ್ಯ ಜೀವಿಸಲು ಆಹಾರ ಎಷ್ಟು ಅಗತ್ಯವೋ, ವಿದ್ಯೆಯೂ ಅಷ್ಟೇ ಅಗತ್ಯ; ಶೀಲವಿಲ್ಲದ ಜ್ಞಾನ ಅಪಾಯಕಾರಿ; ಯಾವುದೂ ನಿರ್ದೋಷವಲ್ಲ, ಯಾವುದೂ ಸದಾ ಬುದ್ಧವಲ್ಲ. ಪ್ರತಿಯೊಂದು ವಿಚಾರಣೆಗೂ ಪರಿಶೀಲನೆಗೂ ಅಧೀನವಾಗಿದೆ; ಯಾವುದೂ ಅಂತಿಮವಲ್ಲ: ಎಲ್ಲವೂ ಕಾರ್ಯಕಾರಣ ನಿಯಮಕ್ಕೆ ಅಧೀನವಾಗಿದೆ; ಯಾವುದೂ ಸನಾತನವಲ್ಲ ಅಥವಾ ಶಾಶ್ವತವಲ್ಲ, ಎಲ್ಲವೂ ಪರಿವರ್ತನಶೀಲವಾದುದು; ಸತ್ಯ ಮತ್ತು ನ್ಯಾಯಕ್ಕಾಗಲ್ಲದಿದ್ದರೆ, ಯುದ್ಧ ಕೆಟ್ಟದ್ದು; ಗೆದ್ದವನು ಸೋತವನನ್ನು ಧರ್ಮದಿಂದ ಕಾಣಬೇಕು;

ಹೀಗೆ, ಸಂಕ್ಷಿಪ್ತವಾಗಿ ಹೇಳುವುದಾದರೆ; ಬುದ್ಧಗುರು ಬೋಧಿಸಿದ ಉದಾತ್ತ ಬೋಧನಾ ತತ್ವದರ್ಶನಗಳು ಎಷ್ಟೊ ಸರಳವೂ ಅಷ್ಟೇ ಹಳೆಯದು ಮತ್ತು ಅಷ್ಟೇ ಹೊಸತೂ ಆಗಿವೆ. ಈ ತತ್ವದರ್ಶಗಳ ವ್ಯಾಪ್ತಿ ವಿಶಾಲವೂ ಮತ್ತು ಆಳವೂ ಆಗಿವೆ. ಇದೇ ಅಲ್ಲದೇ ನೂರಕ್ಕೆ ನೂರರಷ್ಟು ಭಾರತದ ಮಣ್ಣಿಗೆ ಸೇರಿದ ಒಂದು ಮಹಾಮಾರ್ಗದರ್ಶನವಾಗಿದೆ. ಈ ದೇಶದ ಮೂಲ ಬೌದ್ಧಧಮ್ಮಕ್ಕೆ ಸರಿಸುಮಾರು ಎರಡು ಸಾವಿರದ ಆರು ನೂರ ಐವತ್ತೆಂಟು ವರ್ಷಗಳಷ್ಟು ದೀರ್ಘವಾದ ಇತಿಹಾಸವಿದೆ. ಇದನ್ನು ಬೋಧಿಸತ್ವ ಅಂಬೇಡ್ಕರ್ ಅವರು ಸ್ವತಃ ಅವರೇ ಸಂದರ್ಶನವೊಂದರಲ್ಲಿ ಇಷ್ಟು ವರ್ಷಗಳ ಕಾಲ ಈ ಮಾನವೀಯ ಧಮ್ಮವನ್ನು ಸ್ವೀಕರಿಸದೇ ಇದ್ದುದಕ್ಕೆ ನನಗೆ ನಿಜಕ್ಕೂ ವಿಷಾದವಾಗುತ್ತದೆ ಎಂದಿರುವುದು ಕೂಡ ಒಂದು ಮಹಾನ್ ಚರಿತ್ರೆಗೆ ನಾಂದಿಯಾಗಿರುತ್ತದೆ.

ಮಹಾಗುರು ಬುದ್ಧರ ಉದಾತ್ತ ಬೋಧನೆಗಳು ಶಾಶ್ವತವಾದವುಗಳು ಮತ್ತು ಚಿರನೂತನವಾದವಾಗಿರುತ್ತವೆ. ಆದರೂ ಗುರುಬುದ್ಧರು ತಮ್ಮ ಉದಾತ್ತ ಬೋಧನೆಗಳು ಶಾಶ್ವತವಾದವುಗಳೆಂದು ವಾದಿಸಿಲ್ಲ. ಆದರೆ, ಗುರುಬುದ್ಧರು ಬೋಧಿಸಿ ಧಮ್ಮವು ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದುವ ಮಹಾನ್‌ಶಕ್ತಿಯನ್ನು ಪಡೆದಿದೆ. ಇಂತಹ ಗುಣವು ಯಾವುದೇ ಜಗತ್ತಿನ ಇತರ ಯಾವುದೇ ಧರ್ಮಕ್ಕೆ ಇಲ್ಲವಾಗಿದೆ ಎಂಬುದನ್ನು ಅಂಬೇಡ್ಕರ್ ಅವರು ಮಾನವ ಸಮಾಜಕ್ಕೆ ಸ್ಪಷ್ಟಪಡಿಸಿದ್ದಾರೆ.

ಬುದ್ಧಗುರುವಿನ ಉದಾತ್ತ ಚಿಂತನ ದರ್ಶನವಾಗಿರುವ ನಾಲ್ಕು ಶ್ರೇಷ್ಠ ಸತ್ಯಗಳು; ಪಂಚಶೀಲಗಳು; ಅಷ್ಠಾಂಗೀಕ ಮಾರ್ಗ; ದಶಪಾರಾಮಿತಗಳು ಮತ್ತು ತ್ರಿರತ್ನಗಳು; ಭಿಕ್ಕು ಸಂಘಕ್ಕೆ ಮಹಾಗುರು ಬುದ್ಧರು ನೀಡಿದಂಥ ಉದಾತ್ತ ಸುವಾರ್ತೆ ಸಂದೇಶಗಳನ್ನು ಈ ಕೆಳಗಿನಂತೆ ದಾಖಲಿಸಲಾಗಿದೆ. ಅವುಗಳೆಂದರೆ;

**ನಾಲ್ಕು ಶ್ರೇಷ್ಠ ಸತ್ಯಗಳು – ಮೊದಲನೆಯದು** – ದುಃಖ; **ಎರಡನೆಯದು** – ದುಃಖಕ್ಕೆ ಕಾರಣಗಳು; **ಮೂರನೆಯದು** – ದುಃಖ ನಿವಾರಣೆ ಮತ್ತು **ನಾಲ್ಕನೆಯದು** – ದುಃಖ ನಿವಾರಣೆಯ ಮಾರ್ಗಗಳು

**ಪಂಚಶೀಲ ತತ್ವಗಳು** – ಮನುಷ್ಯನ ದುರ್ನಡತೆಯೇ ಅವನ ದುಃಖ ಹಾಗೂ ಅಶಾಂತಿಗೆ ಭಾಗಶಃ ಕಾರಣವಾಗಿರುವದರಿಂದ ಪಂಚಶೀಲ ತತ್ವಗಳ ಆಚರಣೆ ಅವಶ್ಯವಾಗಿದೆ. **ಮೊದಲನೆಯದು;** ಜೀವಿಯನ್ನು ಕೊಲ್ಲುವದು ಅಥವಾ ಕೊಲ್ಲಲು ಸಹಕರಿಸುವದನ್ನು ಮಾಡಬಾರದು. **ಎರಡನೆಯದು;** ಇತರರ ಆಸ್ತಿಯನ್ನು ಕದಿಯುವದು ಅಂದರೆ, ವಶಪಡಿಸಿಕೊಳ್ಳುವದು ಅಥವಾ ಮೋಸದಿಂದ ಅಥವಾ ಹಿಂಸೆಯಿಂದ ಸ್ವಾಧೀನಪಡಿಸಿಕೊಳ್ಳುವದನ್ನು ಮಾಡಬಾರದು. **ಮೂರನೆಯದು;** ಸುಳ್ಳು ಹೇಳಬಾರದು. **ನಾಲ್ಕನೆಯದು;** ಕಾಮತೃಷೆಗೆ ಒಳಗಾಗಬಾರದು ಮತ್ತು ಮದ್ಯಪಾನ ಮಾಡಬಾರದು.

**ಅಷ್ಟಾಂಗೀಕ ಮಾರ್ಗಗಳು** – ಪ್ರಪಂಚದ ದುಃಖ ಮತ್ತು ಅಶಾಂತಿಗೆ ಮನುಷ್ಯ ಮನುಷ್ಯನಿಗೆ ಮಾಡುವ ಅನ್ಯಾಯವೇ ಭಾಗಶಃ ಪ್ರಧಾನ ಕಾರಣವಾಗಿದೆ. ಈ ಅನ್ಯಾಯವನ್ನು ಹೋಗಲಾಡಿಸಲು ಅಷ್ಟಾಂಗೀಕ ಮಾರ್ಗದ ಆಚರಣೆಯ ಅವಶ್ಯವಾಗಿದೆ. ಅವುಗಳೆಂದರೆ; **ಮೊದಲನೆಯದು;** ಸಮ್ಯಕ್ ದೃಷ್ಟಿ: ಅಂದರೆ; ಮೂಢ ನಂಬಿಕೆಗಳಿಂದ ವಿಮೋಚನೆ. **ಎರಡನೆಯದು;** ಸಮ್ಯಕ್ ಗುರಿ: ಅಂದರೆ ಧೀಮಂತರಿಗೂ, ಶ್ರದ್ಧಾಂವತರಿಗೂ ಯೋಗ್ಯವಾದದ್ದು. **ಮೂರನೆಯದು;** ಸಮ್ಯಕ್ ವಚನ: ಅಂದರೆ ದಯಾವಂತ, ಸತ್ಯಪರವಾದ ಬಿಚ್ಚುಮಾತು. **ನಾಲ್ಕನೆಯದು;** ಸಮ್ಯಕ್ ನಡೆ: ಶಾಂತಿಯುತವಾದುದು, ಪ್ರಾಮಾಣೀಕವಾದುದು, ಪರಿಶುದ್ಧವಾದುದು. **ಐದನೆಯದು;** ಸಮ್ಯಕ್ ಜೀವನ: ಯಾವ ಜೀವಿಗೂ ನೋವುಂಟು ಮಾಡದಿರುವದು. **ಆರನೆಯದು;** ಸಮ್ಮಕ್ ಸಾಧನೆ: ಈ ಎಲ್ಲ ವಿಷಯಗಳಲ್ಲಿ ಸಾಧನೆ. **ಏಳನೆಯದು;** ಸಮ್ಯಕ್ ಮನಸ್ಸು: ಜಾಗೃತ ಮತ್ತು ಕ್ರಿಯಾಶೀಲ ಮನಸ್ಸು ಮತ್ತು **ಎಂಟನೆಯದು;** ಸಮ್ಯಕ್ ಧ್ಯಾನ: ಜೀವನದ ಗಂಭೀರ ರಹಸ್ಯಗಳನ್ನು ಕುರಿತ ಗಾಢ ಚಿಂತನೆಯಾಗಿರುತ್ತದೆ.

**ದಶಪಾರಾಮಿತಗಳು - ಮೊದಲನೆಯದು** – ದಾನಪಾರಾಮಿ; **ಎರಡನೆಯದು** – ಸಿಲಾಪಾರಾಮಿ; **ಮೂರನೆಯದು** – ನೆಖ್ಖಾಮಪಾರಾಮಿ; **ನಾಲ್ಕನೆಯದು** – ಪನ್ನಪಾರಾಮಿ; **ಐದನೆಯದು** – ವೀರ್ಯಪಾರಾಮಿ; **ಆರನೆಯದು** – ಕಾಂತಿಪಾರಾಮಿ; **ಏಳನೆಯದು** – ಸಕ್ಕಾಪಾರಾಮಿ; **ಎಂಟನೆಯದು** – ಅಧಿತ್ತಾನಪಾರಾಮಿ; **ಒಂಭತ್ತನೆಯದು** – ಮೆತ್ತಪಾರಾಮಿ; **ಮತ್ತು ಹತ್ತನೆಯದು** – ಉಪೆಖಾಪಾರಾಮಿ;

**ತ್ರಿರತ್ನಗಳು** – ಪ್ರಜ್ಞಾ, ಶಿಲಾ ಮತ್ತು ಸಮಾಧಿ

ಹೀಗೆ, ಆಧುನಿಕ ಭಾರತದ ಸಂದರ್ಭದಲ್ಲಿ ಗುರುಬುದ್ಧ ಮತ್ತು ಅವರು ತತ್ವ ಸಿದ್ಧಾಂತಗಳು ಹೆಚ್ಚು ಪ್ರಜ್ವಲಮಾನವಾಗಿವೆ. ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಗ್ರಹಿಸಿದಂತೆಯೇ ಕಾರ್ಲ್ ಮಾರ್ಕ್ಸ್ ಅವರ ಸಿದ್ಧಾಂತ ನಿಂತಿದೆ. ಅವು ಈ ಮುಂದಿನಂತಿವೆ. ತತ್ವಜ್ಞಾನದ ಉದ್ದೇಶ ಪ್ರಪಂಚವನ್ನು ಪುನರ್ ರಚಿಸುವದು, ವಿಶ್ವದ ಮೂಲವನ್ನು ವಿವರಿಸುವದಲ್ಲ; ಇತಿಹಾಸದ ಗತಿಯನ್ನು ನಿರ್ಧರಿಸುವ ಶಕ್ತಿಗಳು ಮುಖ್ಯವಾಗಿ ಆರ್ಥಿಕವಾಗಿವೆ; ಸಮಾಜ ಒಡೆಯರು ಮತ್ತು ದುಡಿಮೆಗಾರರು ಎಂದು ಎರಡು ವರ್ಗಗಳಾಗಿ ಇಬ್ಭಾಗವಾಗಿದೆ; ಈ ಎರಡು ವರ್ಗಗಳ ನಡುವೆ ವರ್ಗ ಸಂಘರ್ಷ ಸದಾ ನಡೆಯುತ್ತಿದೆ; ದುಡಿಮೆಗಾರರ ಶ್ರಮದ ಫಲವಾಗಿ ಬಂದ ಅಧಿಕ ಮೌಲ್ಯವನ್ನು ದುರುಪಯೋಗ ಮಾಡುವ ಮಾಲೀಕರು ಶ್ರಮ ಜೀವಿಗಳನ್ನು ಶೋಷಣೆ ಮಾಡುತ್ತಾರೆ; ಉತ್ಪಾದನಾ ಸಾಧನಗಳನ್ನು ರಾಷ್ಟ್ರೀಕರಣಗೊಳಿಸುವದರಿಂದ ಅಂದರೆ; ಖಾಸಗಿ ಆಸ್ತಿಯನ್ನು ತೊಡೆದು ಹಾಕುವದರಿಂದ ಈ ಶೋಷಣೆಯನ್ನು ನಿಲ್ಲಿಸಬಹುದು; ಈ ಶೋಷಣೆಯು ದುಡಿಮೆಗಾರರ ಹೆಚ್ಚು-ಹೆಚ್ಚು ದಾರಿದ್ರ್ಯಕ್ಕೆ ದಾರಿ ಮಾಡಿಕೊಡುತ್ತದೆ; ದುಡಿಮೆಗಾರರು ಹೆಚ್ಚುತ್ತಿರುವ ದಾರಿದ್ರ್ಯದಿಂದ ಅವರಲ್ಲಿ ಕ್ರಾಂತಿಕಾರಿ ಮನೋಭಾವ ಮೂಡುತ್ತದೆ. ವರ್ಗ ಸಂಘರ್ಷವು ವರ್ಗ ಹೋರಾಟವಾಗಿ ಮಾರ್ಪಡುತ್ತದೆ; ಕೂಲಿಕಾರರ ಸಂಖ್ಯೆ ಮಾಲೀಕರ ಸಂಖ್ಯೆಗಿಂತ ಹೆಚ್ಚಾಗಿರುವದರಿಂದ ಕೂಲಿಕಾರರು ರಾಜ್ಯಶಕ್ತಿಯನ್ನು ವಶಪಡಿಸಿಕೊಂಡು ತಮ್ಮದೇ ಆಡಳಿತವನ್ನು ಸ್ಥಾಪಿಸುತ್ತಾರೆ. ಇದನ್ನು ಶ್ರಮಜೀವಿಗಳ ಅಥವಾ ದುಡಿಯುವ ವರ್ಗದ ಪ್ರಭುತ್ವವೆಂದು ಅವನು ಕರೆಯುತ್ತಾನೆ; ಈ ಅಂಶಗಳು ವಿರೋಧಿಸಲಾಗದವು. ಆದ್ದರಿಂದ ಸಮಾಜವಾದ ಅನಿವಾರ್ಯವಾಗುತ್ತದೆ.

ಕಾರ್ಲ್‌ಮಾರ್ಕ್ಸ್‌ನ ಸಮಾಜದ ಮೂಲ ಆಧಾರವನ್ನು ರೂಪಿಸಿದ ಈ ವಾದಗಳನ್ನು ಅಂಬೇಡ್ಕರ್ ಅವರು ಸರಿಯಾಗಿಯೇ ಉಲ್ಲೇಖಿಸಿದ್ದಾರೆ. ಕಾರ್ಲ್‌ಮಾರ್ಕ್ಸ್ ಆಧುನಿಕ ಸಮಾಜವಾದ ಅಥವಾ ಸಮತಾವಾದದ ಜನಕ ಎನ್ನುವದು ನಿಸ್ಸಂದೇಹವಾದುದು. ಆದರೆ, ಅವನು ಸಮಾಜವಾದವನ್ನು ಕೇವಲ ಪ್ರತಿಪಾದಿಸುವದರಲ್ಲಿ ಆಸಕ್ತನಾಗಿರಲಿಲ್ಲ. ಅದನ್ನು ಅವನಿಗಿಂತ ಮೊದಲೇ ಇತರರು ಮಾಡಿದ್ದರು. ಸಮಾಜವಾದ ವೈಜ್ಞಾನಿಕವಾದುದು ಎಂದು ಸಾಧಿಸಿ ತೋರಿಸುವಲ್ಲಿ ಮಾರ್ಕ್ಸ್ ಹೆಚ್ಚು ಆಸಕ್ತನಾಗಿದ್ದನು. ಅವನ ಧರ್ಮಯುದ್ಧ ಬಂಡವಾಳಶಾಹಿಗಳ ವಿರುದ್ಧ ಇದ್ದಷ್ಟೇ ಅವನು ಯಾರನ್ನೂ ಕಲ್ಪನಾ ಸಮಾಜವಾದಿಗಳೆಂದು ಕರೆದನೋ ಅವರ ವಿರುದ್ಧವೂ ಇತ್ತು. ಅವನು ಇಬ್ಬರನ್ನೂ ದ್ವೇಷಿಸಿದನು. ಈ ಅಂಶವನ್ನು ಗಮನಿಸುವದು ಅವಶ್ಯವಾಗಿದೆ. ಏಕೆಂದರೆ, ಸಮಾಜವಾದದ ವೈಜ್ಞಾನಿಕ ಸ್ವಭಾವಕ್ಕೆ ಅತ್ಯಂತ ಪ್ರಾಮುಖ್ಯತೆಯನ್ನು ಮಾರ್ಕ್ಸ್ ನೀಡಿದನು. ತನ್ನ ಸಮಾಜವಾದವು ವೈಜ್ಞಾನಿಕವಾದುದು, ಕಾಲ್ಪನಿಕವಾದುದಲ್ಲ ಎಂಬ ವಾದವನ್ನು ಸ್ಥಾಪಿಸುವದನ್ನು ಬಿಟ್ಟರೆ, ಅವನು ಪ್ರತಿಪಾದಿಸಿದ ಎಲ್ಲ ವಾದಗಳಿಗೂ ಬೇರೆ-ಬೇರೆ ಗುರಿ ಇರಲಿಲ್ಲ ಎಂದು ಅಂಬೇಡ್ಕರ್ ಅವರು ಹೇಳುತ್ತಾರೆ. ತನ್ನ ಸಮಾಜವಾದವು ಅನಿವಾರ್ಯವು ಅಪರಿಹಾರ್ಯವೂ ಆದುದು. ಸಮಾಜ ಅದರತ್ತ ಚಲಿಸುತ್ತಿದೆ. ಅದರ

ಮುನ್ನಡೆಯನ್ನು ಯಾವುದೂ ತಡೆಗಟ್ಟಲಾರದು ಎಂದು ಕಾರ್ಲ್‌ಮಾರ್ಕ್ಸ್ ವೈಜ್ಞಾನಿಕ ಸಮಾಜವಾದಕ್ಕೆ ಅರ್ಥಕೊಟ್ಟನು. ತನ್ನ ವಾದವನ್ನು ಸಾಧಿಸಲು ಮಾರ್ಕ್ಸ್ ಪ್ರಧಾನವಾಗಿ ಶ್ರಮಿಸಿದನು. ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತವು ಇವತ್ತಿಗೂ ಜೀವಂತವಾಗಿ ಉಳಿದಿರಲು ಒಂದು ಬೆಂಕಿಕೆಂಡ ಅದು ಸಣ್ಣದದರೂ ತುಂಬಾ ಮಹತ್ವದ್ದಾಗಿದೆ. ಅಂಬೇಡ್ಕರ್ ಅವರ ಪ್ರಕಾರ ನಾಲ್ಕು ಅಂಶಗಳಿವೆ. ಅವು ಈ ಕೆಳಗಿನಂತಿವೆ. ಅವುಗಳೆಂದರೆ;

**ಮೊದಲನೆಯದು** – ತತ್ವಜ್ಞಾನದ ಕೆಲಸ ಪ್ರಪಂಚವನ್ನು ಪುನರ್ ರಚಿಸುವುದು, ಪ್ರಪಂಚದ ಮೂಲವನ್ನು ಕುರಿತು ವಿವರಿಸುವದರಲ್ಲಿ ಕಾಲಹರಣ ಮಾಡುವುದಿಲ್ಲ.

**ಎರಡನೆಯದು** – ವರ್ಗ–ವರ್ಗಗಳ ನಡುವೆ ಹಿತಾಸಕ್ತಿಗಳ ಸಂಘರ್ಷವಿದೆ.

**ಮೂರನೆಯದು** – ಆಸ್ತಿಯ ಖಾಸಗಿ ಒಡೆತನ ಒಂದು ವರ್ಗಕ್ಕೆ ಅಧಿಕಾರವನ್ನೂ, ಇನ್ನೊಂದು ವರ್ಗಕ್ಕೆ ದುಃಖವನ್ನು ಶೋಷಣೆಯ ಮೂಲಕ ಬರುತ್ತದೆ.

**ನಾಲ್ಕನೆಯದು** – ಸಮಾಜದ ಒಳಿತಿಗಾಗಿ ದುಃಖವನ್ನು ನಿರ್ಮೂಲನೆ ಮಾಡಲು ಖಾಸಗಿ ಆಸ್ತಿಯನ್ನು ತೊಡೆದು ಹಾಕಬೇಕು.

ಬುದ್ಧ ಮತ್ತು ಮಾರ್ಕ್ಸ್‌ರ ತತ್ವ ಸಿದ್ಧಾಂತಗಳ ಹೋಲಿಕೆಯನ್ನು ಅವಲೋಕಿದಾಗ – ಮೊದಲನೆಯದಾಗಿ; ಬುದ್ಧ ಮತ್ತು ಮಾರ್ಕ್ಸ್‌ರಲ್ಲಿ ಸಂಪೂರ್ಣ ಒಪ್ಪಿಗೆಯಿದೆ. ಎರಡನೆಯದು ಬಗೆಗೂ ಎಂದೆ ಹೇಳಬೇಕು. ಬುದ್ಧಗುರುವಿನ ಅಷ್ಟಾಂಗೀಕ ಮಾರ್ಗವೇ ಇದಕ್ಕೆ ಸಾಕ್ಷಿ. ಬಳಸಿದ ಭಾಷೆ ಬೇರೆಯಾದರೂ ಅರ್ಥ ಒಂದೆ. ಖಾಸಗಿ ಆಸ್ತಿಯ ಬಗೆಯೂ ಅಷ್ಟೇ ಪರಸ್ಪರ ಒಪ್ಪಿಗೆಯಿದೆ. ಇನ್ನು ನಾಲ್ಕನೇ ಅಂಶದ ಬಗೆಗೆ ಬೇರೆ ಸಾಕ್ಷ್ಯದ ಅಗತ್ಯವೇ ಇಲ್ಲ, ಭಿಕ್ಕು ಸಂಘದ ನಿಯಮಗಳೇ ಅದನ್ನು ಸ್ಪಷ್ಟಪಡಿಸುತ್ತವೆ ಎಂಬುದನ್ನು ಇಲ್ಲಿ ಕಾಣಬಹುದು. ಸಮತಾವಾದವನ್ನು ತರುವಲ್ಲಿ ಬುದ್ಧಗುರುವಿನ ವಿಚಾರಗಳು ನಿರ್ದಿಷ್ಟವಾಗಿದ್ದವು. ಅದನ್ನು ಒಂದೇ ಮಾತಿನಲ್ಲಿ ಹೇಳವುದಾದರೆ; ಒಬ್ಬ ಮನುಷ್ಯನನ್ನು ನೈತಿಕ ಮಾರ್ಗ ಬಳಸಿ ಬದಲಾಯಿಸಬೇಕು. ಕಮ್ಯುನಿಸ್ಟರ ಸಾಧನ ಕೂಡ ಸ್ಪಷ್ಟ ಹಿಂಸೆ ಮತ್ತು ಕಾರ್ಮಿಕ ವರ್ಗದ ಸರ್ವಾಧಿಕಾರತ್ವ ಇದರಿಂದ ಸ್ಪಷ್ಟವಾಗುವುದೇನೆಂದರೆ; ಬುದ್ಧ ಮತ್ತು ಮಾರ್ಕ್ಸ್‌ರ ಅಂತಿಮ ಗುರಿ ಒಂದೇ ಆದರೂ ಮಾರ್ಗಗಳು ಮಾತ್ರ ಬೇರೆಯಾಗಿವೆ. ಬುದ್ಧಗುರುವಿನ ಮಾರ್ಗದ ಪರಮಗುರಿ ಎಂದರೆ; ನೈತಿಕ ಶಕ್ತಿಯನ್ನು ಯಾವುದೇ ರೀತಿಯ ಮೃತೀಯ ಶಕ್ತಿ ತಳ್ಳೀ ಹಾಕಬಾರದು ಎಂದು ಪ್ರತಿಯೊಬ್ಬ ಉತ್ತಮ ಹಾಗೂ ಆದರ್ಶ ರಾಜ್ಯದ ಸಾಧನವಾಗಬೇಕು ಎಂದು ಅಂಬೇಡ್ಕರ್ ಅವರು ಹೇಳುತ್ತಾರೆ.

ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್ ಅವರ ತತ್ವ ಸಿದ್ಧಾಂತಗಳು ತುಂಬಾ ಪ್ರಾಮುಖ್ಯತೆ ಪಡೆಯುತ್ತವೆ. ಆಧುನಿಕ ಜಗತ್ತಿನ ಸಮಾಜವಾದಿ ಕಾರ್ಲ್‌ಮಾರ್ಕ್ಸ್‌ನೊಂದಿಗೆ ಬುದ್ಧಗುರುವನ್ನು ಇಟ್ಟು

ನೋಡುವ ಅಂಬೇಡ್ಕರ್ ಅವರು ಮಾರ್ಕ್ಸ್‌ನ ಪ್ರಮುಖ ಸಿದ್ಧಾಂತಗಳನ್ನು ಕ್ರಿ.ಪೂ.ದ ಬುದ್ಧಗುರು ಅಂದೇ ಜಗತ್ತಿಗೆ ನೀಡಿರುವದನ್ನು ಸಾಧಿಸಿ ತೋರಿಸಿರುವದನ್ನು ಆಧಾರಪೂರ್ವಕವಾಗಿ ಪರಿಶೀಲಿಸಿದ್ದಾರೆ. ಇದೇ ಅಲ್ಲದೇ ಮಾರ್ಕ್ಸ್‌ನ ಚಿಂತನೆ ಹೊಸದಾಗಿದ್ದಾದರೂ ಗುರುಬುದ್ಧರ ಅಂದಿನ ಚಿಂತನೆ ಇಂದಿಗೂ ಹೇಗೆ ಪ್ರಸ್ತುತ ಎನ್ನುವದು ಮನದಟ್ಟಾಗುತ್ತದೆ.

## ಗ್ರಂಥಸೂಚಿ


1. **ಡಾ.ಬಾಬಾಸಾಹೇಬ್ ಅಂಬೇಡ್ಕರ್ ಸಮಗ್ರ ಬರೆಹಗಳು ಮತ್ತು ಭಾಷಣಗಳು, ಸಂಪುಟ–03,** 2015
2. ಮೂಡ್ನಕೂಡು ಚಿನ್ನಸ್ವಾಮಿ (ಪ್ರ.ಸಂ), ಜೆ.ಸೋಮಶೇಖರ್ (ವ್ಯ.ಸಂ), ***ಮರಳಿ ಮನೆಗೆ,*** 2006
3. ದತ್ತಾತ್ರೇಯ ಇಕ್ಕಳಿಕಿ (ಸಂ), ***ಅಂಬೇಡ್ಕರ್ ಚಿಂತನೆ,*** 2006
4. ಗೋಪಾಲ್.ಜಿ, ***ನವಭಾರತ ನಿರ್ಮಾಪಕರು ಡಾ.ಬಿ.ಆರ್.ಅಂಬೇಡ್ಕರ್,*** 2017
5. ಗೇಲ್ ಆಮ್‌ವೆಡ್ತ್ (ಮೂಲ),ರಾಹು (ಅನು), ***ಅಂಬೇಡ್ಕರ್ ಪ್ರಭುದ್ಧ ಭಾರತದ ದ್ರಷ್ಟಾರ,*** 2010
6. ರಾಚಪ್ಪಾಜಿ.ಎಂ, ನಾಗರಾಜ್.ಎಸ್, (ಸಂ) ***ವಿಮೋಚನಾ ಹಾದಿ,*** 2008
7. ಜಾಕೋಬ್ ಲೋಬೋ.ಸಿ.ಎಚ್, (ಅನು) ಜಿ.ಎಸ್.ಲೋಖಂಡೆ (ಮೂಲ), ***ಭೀಮರಾವ್ ರಾಮ್‌ಜೀ ಅಂಬೇಡ್ಕರ್ (ಸಾಮಾಜಿಕ ಪ್ರಜಾಪ್ರಭುತ್ವದ ಒಂದು ಅಧ್ಯಯನ),*** 2009
8. ಜವರಯ್ಯ.ಮ.ನ, ***ಡಾ.ಅಂಬೇಡ್ಕರ್ ವಿರಚಿತ ಬುದ್ಧ, ಮಾರ್ಕ್ಸ್, ಗಾಂಧಿ,*** 1998
9. ಜವರಯ್ಯ.ಮ.ನ, ***ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ,*** 1995
10. ಮಾಧವ ರಾವ್.ಎಂ.ಎಸ್,(ಅನು)***ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ ಮತ್ತು ಸಾಧನೆ,*** 1977
11. ಮಂಗ್ಳೂರ ವಿಜಯ (ಸಂಗ್ರಹ), ***ಸಂಘರ್ಷ – ಅಂಬೇಡ್ಕರ್ ಜೀವನ ಸಾಧನೆ,*** 2002.
12. ವಿದ್ಯಾಸಾಗರ.ಐ.ಎಸ್, ***ಅಂಬೇಡ್ಕರ್ ಮತ್ತು ಮಾನವೀಯ ಮೌಲ್ಯಗಳು,*** 2005
13. ಮನ್ನೆಪ್ಪ.ಎಸ್. ಮಾಳ್ಗಿ, ***ಬಸವೇಶ್ವರ ಮತ್ತು ಅಂಬೇಡ್ಕರ್ ಅವರ ರಾಜಕೀಯ ಚಿಂತನೆಗಳಲ್ಲಿ ಸಾಮಾಜಿಕ ನ್ಯಾಯ,*** 2004
14. ನರೇಂದ್ರಕುಮಾರ್.ಎಸ್, ***ಅಂಬೇಡ್ಕರ್ ಮತ್ತು ಹೊಸ ಸಮಾಜ,*** 2002
15. **Dr.Babasaheb Ambedkar Writings and Speeches,** Vol-03, 2014